ಓಸ್. ನಂ. 562/2017
ಪಿಡಬ್ಲ್ಯು :4

ಸಾಕ್ಷಿಗೆ ಇಂದು ದಿನಾಂಕ 22/07/2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟಿ ಸವಾಲು ಶ್ರೀ. ಎಜಿಪಿ ಯವರಿಂದ ಪ್ರತಿವಾದಿಗಳ ಪರವಾಗಿ.

1. ನಾವು ಚಡಚಣ ಗ್ರಾಮದ ನಿವಾಸಿ. ನನಗೆ ಮೃತ ಆನಂದಪ್ಪ ಇವರ ಪರಿಚಯ ಇರುತ್ತದೆ. ಆನಂದಪ್ಪನಿಗೆ ನಾಲ್ಕು ಜನ ಮಕ್ಕಳಿದ್ದು ಮಲ್ಲು, ಶ್ರೀಶೈಲಪ್ಪ, ಸಿದ್ರಾಮಪ್ಪ, ಚಿದಾನಂದ .ಆನಂದಪ್ಪನವರಿಂದ ಪ್ರತಿವಾದಿ ನಂ. 1 ರವರಿಗೆ ಸುಮಾರು 6 ರಿಂದ 6 ವರೆ ಎಕರೆ ಜಮೀನು ಅವರ ಪಾಲಿಗೆ ಬಂದಿರುತ್ತದೆ. ವಾದಿ ನಂ. 3 ರವರು ಪ್ರತಿವಾಧಿ ನಂ. 1 ರವರ ಹೆಂಡತಿಯಾಗಿರುತ್ತಾರೆ. ದಾವಾ ಜಮೀನು ಚಡಚಣದಿಂದ ಪಂಡರಾಪುರಕ್ಕೆ ಹೋಗುವ ರಸ್ತೆಯಲ್ಲಿರುತ್ತದೆ. ದಾವಾ ಜಮೀನು ಮೊದಲು ಶ್ರೀಶೈಲನ ಹೆಸರಿಗೆ ಇತ್ತು, ಈಗ ಸರ್ಕಾರದವರು ಖೊಟ್ಟಿಯಾಗಿ ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ. ನಾನು ದಾವಾ ಜಮೀನನ್ನು ನೋಡಿರುತ್ತೇನೆ. ದಾವಾ ಜಮೀನಿನಲ್ಲಿ ಸರ್ಕಾರದವರು ಪತ್ರಾಸ ಶೆಡ್ಡು ಹಾಕಿರುತ್ತಾರೆ. ಅಂದಾಜು 30-40 ಫೂಟು ಇರುತ್ತದೆ. ಸದರಿ ದಾವಾ ಜಮೀನಿನಲ್ಲಿ ಸರ್ಕಾರದವರೇ ಇರುತ್ತಾರೆ. ವಾದಿಯರು ಸರ್ಕಾರದ ವಿರುದ್ದ ಸದರಿ ದಾವಾ ಜಮೀನಿನಲ್ಲಿ ಪಾಲು ಕೇಳಿ ದಾವೆ ದಾಖಲಿಸಿರುತ್ತಾರೆ. ನಾನು ದಾನ ಪತ್ರ ಮಾಡುವಾಗ ಉಪನೊಂದಣಾಧಿಕಾರಿ ಕಚೇರಿಗೆ ಹೋಗಿರುವುದಿಲ್ಲ. ಸದರಿ ದಾನ ಪತ್ರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಂತರ ಸಾಕ್ಷಿಯು ಮುಂದುವರಿದು ಶೆಡ್ಡ ಹಾಕಿದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಈ ದಾವೆಯ ಜಮೀನಿನ ಚಾಲ್ತಿ ಉತಾರೆಯನ್ನು ನೋಡಿರುವುದಿಲ್ಲ. ಈಗ ಚಾಲ್ತಿ ಉತಾರೆಯಲ್ಲಿ ಸರ್ಕಾರದವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವರು ಖೊಟ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ಸುಳ್ಳು ಪ್ರಕರಣವನ್ನು ದಾಖಳಿಸಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಮತ್ತು ವಾದಿಗೆ ಯಾವುದೇ ಸಂಬಂಧ ಇರದೇ ಇದ್ದರೂ ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.

ಸಾಕ್ಷಿಗೆ ಇಂದು ದಿನಾಂಕ 22/07/2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಶ್ರೀ. ಎಜಿಪಿ ಯವರಿಂದ ಪ್ರತಿವಾದಿಗಳ ಪರವಾಗಿ.

2. ನಾನು ನಿಪಿ-9 - ದಾನಪತ್ರಕ್ಕೆ ಯಾವುದೇ ಸಹಿ ಮಾಡಿರುವುದಿಲ್ಲ. ದಾನ ಪತ್ರ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆ ವಾದಿ ನಂ.3 ರವರು ಸರ್ವೆ ನಂ. 441 ಕ್ಷೇತ್ರ 6 ಎಕರೆ 20 ಗುಂಟೆಗೆ ಸಂಬಂಧಿಸಿದಂತೆ ಚಡಚಣ ಗ್ರಾಮಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯ ವಿರುದ್ಧ ದಾವೆ ಹಾಕಿರುತ್ತಾರೆ. ದಾವಾ ಜಮೀನಿನ ಮೂಲ ಮಾಲೀಕರು ಆನಂದಪ್ಪ ಭೂಂಶೆಟ್ಟಿ. ಆನಂದಪ್ಪ ಭೂಂಶೆಟ್ಟಿ ಇವರಿಗೆ ನಾಲ್ಕು ಜನ ಮಕ್ಕಳಿದ್ದು ಮಲ್ಲು, ಶ್ರೀಶೈಲಪ್ಪ, ಸಿದ್ಧಾರಾಮಪ್ಪ, ಚಿದಾನಂದ . ವಾದಿ ನಂ. 3 ರವರು ಪ್ರತಿವಾಧಿ ನಂ. 1 ರವರ ಹೆಂಡತಿಯಾಗಿರುತ್ತಾರೆ. ಪ್ರತಿವಾದಿ ನಂ. 1 ರವರ ಪಾಲಿಗೆ 6 ಎಕರೆ 20 ಗುಂಟೆ ಜಮೀನು ಬಂದಿರುತ್ತದೆ. ಸದರಿ 6 ಎಕರೆ 20 ಗುಂಟೆ ಜಮೀನಿನ ಮಾಲೀಕ ಪ್ರತಿವಾದಿ ನಂ. 1 ರವರು ಒಬ್ಬರೇ ಆಗಿರುತ್ತಾರೆ. ಪ್ರತಿವಾದಿ ನಂ. 1 ರವರ ಪಾಲಿಗೆ ದಾವಾ ಆಸ್ತಿ ಬಂದಿರುವುದರಿಂದ ಅವರು ಏನು ಬೇಕಾದರೂ ಮಾಡಬಹುದು ಎಂದರೆ ಸಾಕ್ಷಿಯು ಅದು ಅಜ್ಜನ ಆಸ್ತಿ ಇರುವುದರಿಂದ ಮೊಮ್ಮಕ್ಕಳು ಪಾಲುದಾರರು ಆಗಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ. 1 ರವರು ಕಮರ್ಶಿಯಲ ಟ್ಯಾಕ್ಸ ಆಫೀಸರಿಗೆ ದಾನ ನೀಡಿರುತ್ತಾರೆ. ಸುಮಾರು 26-27 ವರ್ಷದ ಹಿಂದೆ ಶ್ರೀಶೈಲಪ್ಪನವರು ಕಮರ್ಶಿಯಲ್ ಟ್ಯಾಕ್ಸ ಆಫೀಸರವರಿಗೆ ದಾನ ನೀಡಿರುತ್ತಾರೆ. ಚಡಚಣ ಗ್ರಾಮದ ಸರ್ವೆ ನಂ. 441 ಆಸ್ತಿಯ ಪೈಕಿ 6 ಎಕರೆ 21 ಗುಂಟೆ ಜಮೀನಿನಲ್ಲಿ 5 ಎಕರೆ ಜಮೀನನ್ನು ಪ್ರತಿವಾದಿ ನಂ. 1 ರವರು ರಾಜ್ಯಪಾಲರ ಹೆಸರಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಯವರಿಗೆ ದಾನ ಪತ್ರ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಯರು ದಾವೆಯನ್ನು ದಾಖಲೆ ಮಾಡಿದ ನಂತರ ನನಗೆ ಈ ಪ್ರಕರಣದ ಬಗ್ಗೆ ಗೊತ್ತಾಗಿರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಮಾಹಿತಿ ಇರದೇ ಇದ್ದರೂ

ನ್ಯಾಯಾಲಯದಲ್ಲಿ ವಾದಿಯರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

3. ನಿಪಿ-1 ಮತ್ತು 2 ಪಹಣಿ ಪತ್ರಿಕೆಯು ರಾಜ್ಯಪಾಲರ ಪರವಾಗಿ ವಾಣಿಜ್ಯ ತೆರಿಗೆ ಇಲಾಖೆಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ಖೊಟ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರಕ್ಕೆ ಸಂಬಂಧಿಸಿದಂತೆ ನಾವು ಹೋಗಿ ವಾಣಿಜ್ಯ ತೆರಿಗೆ ಇಲಾಖೆಯವರನ್ನು ಪ್ರಶ್ನಿಸಿರುವುದಿಲ್ಲ, ವಾದಿಯರು ಹೋಗಿ ಪ್ರಶ್ನಿಸಿರುತ್ತಾರೆ. ದಾವಾ ಜಮೀನಿನ ಮೌಲ್ಯ ಜಾಸ್ತಿಯಾಗಿರುವುದರಿಂದ ವಾದಿಯರು ಮಿಲಾಪಿಯಾಗಿ ಖೊಟ್ಟಿ ದಾವೆಯನ್ನು ದಾಖಲಿಸಿದ್ದು ಅದಕ್ಕೆ ನಾನು ಸುಳ್ಳು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇರದೇ ಇದ್ದರೂ ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.

ಸಾಕ್ಷಿಗೆ ಇಂದು ದಿನಾಂಕ 22/07/2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟಿ ಸವಾಲು ಶ್ರೀ. ಎಜಿಪಿ ಯವರಿಂದ  ಪ್ರತಿವಾದಿಗಳ ಪರವಾಗಿ.

2. ಆನಂದಪ್ಪ ನನಗೆ ಮಾವನಾಗಬೇಕು. ದಾವಾ ಜಮೀನು ಆನಂದಪ್ಪನವರ ಸ್ವಂತ ಜಮೀನು. 1996 ರಲ್ಲಿ ದಾವಾ ಜಮೀನು ವಾಟ್ನಿಯಾಗಿದ್ದು ನಮ್ಮ ಮನೆಯವರಿಗೆ 6 ಎಕರೆ 21 ಗುಂಟೆ ಜಮೀನು ಪಾಲಿಗೆ ಬಂದಿರುತ್ತದೆ. ನಮ್ಮ ಮನೆಯವರ ಪಾಲಿಗೆ ಸರ್ವೆ ನಂ. 441/2 ಎ ಮತ್ತು 441/3 ಎ ಜಮೀನುಗಳು ಬಂದಿರುತ್ತವೆ. ಪ್ರತಿವಾದಿ ನಂ. 1 ರವರಿಗೆ ವಾಟ್ನಿಯಾದ ನಂತರ ಬಂದ ಜಮೀನುಗಳ ಸಂಪೂರ್ಣ ಮಾಲೀಕ ಪ್ರತಿವಾದಿ ನಂ. 1 ರವರೇ ಆಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ. 1 ರವರಿಗೆ ವಾಟ್ನಿಯಲ್ಲಿ ಪಾಲು ಬಂದಿದ್ದರಿಂದ ಅವರಿಗೆ ಜಮೀನನ್ನು ಮಾರಾಟ , ಪರಭಾರೆ ಮಾಡುವ ಸಂಪೂರ್ಣ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರಿದು ನಾನು ಪ್ರತಿವಾದಿ ನಂ. 1 ರವರ ಹೆಂಡತಿ ಇರುವುದರಿಂದ ನಮಗೂ ಪಾಲು ಇದೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ. 1 ರವರು ಜಮೀನಿನ ಸಂಪೂರ್ಣ ಮಾಲೀಕರಾಗಿರುವುದರಿಂದ ನನಗೂ ಮತ್ತು ನನ್ನ ಮಕ್ಕಳಿಗೂ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ.  ಪ್ರತಿವಾದಿ ನಂ. 1 ರವರು ಮಾಡಿದ ದಾನಪತ್ರದ ಪ್ರಕಾರ ವಾಣಿಜ್ಯ ಇಲಾಖೆಯವರು ಉತಾರೆ ಮತ್ತು "ಡ" ನಂಬರನ್ನು ದಾನಪತ್ರದ ಮೂಲಕ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಖೊಟ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

3. ನಮಗೆ ದಾವಾ ಜಮೀನಿನಲ್ಲಿ 1/3 ಪಾಲು ಬರುತ್ತದೆ ಎಂದು ಆಸ್ತಿಯ ಬೆಲೆ ಜಾಸ್ತಿಯಾಗಿರುವುದರಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ಮತ್ತು ನಾವು ಸೇರಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆನಂದಪ್ಪರವರು ತೀರಿಕೊಂಡ ನಂತರ ಅವರ ಮಕ್ಕಳ ಮಧ್ಯ ಪಾಲು ವಾಟ್ನಿಯಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಪ್ರತಿವಾದಿ ನಂ. 1 ರವರು ಮದ್ಯಪಾನ ಮತ್ತು ಇಸ್ಪೇಟ ಚಟಗಳಿಂದ ದಾವಾ ಆಸ್ತಿಯನ್ನು ದಾನ ಮಾಡಿರುತ್ತಾನೆ ಎಂದು  ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ರಸ್ತೆಯ ಪಕ್ಕದಲ್ಲಿ ಇರುವುದರಿಂದ

ಅದರ ಬೆಲೆ ಜಾಸ್ತಿ ಇರುವುದರಿಂದ ನಾವು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಜಮೀನು ಎಕತ್ರ ಕುಟುಂಬದ ಆಸ್ತಿ ಎಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ 10x 20 ಪ್ರತಿವಾದಿ ನಂ. 1 ರವರ ಬಿಲ್ಡಿಂಗ ಇರುತ್ತದೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಯಾವುದೇ ರೀತಿಯ ಚೆಕಪೋಸ್ಟ ಇದೆ ಎಂದರೆ ಸರಿಯಲ್ಲ. ನೆಪ ಮಾತ್ರಕ್ಕೆ ಇರುತ್ತದೆ ಎಂದರೆ ಸರಿ. ದಾವಾ ಜಮೀನಿನ ಸರ್ವೆ ನಂ. 441/2 ನೊಂದಣಿಯಾಗಿದ್ದು ಅದನ್ನು ಖೊಟ್ಟಿ ತಯಾರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಜಮೀನು ದಾನ ಪತ್ರ ನೀಡಿದ್ದು 2016 ರಲ್ಲಿ ನನ್ನ ಗಮನಕ್ಕೆ ಬಂದಿರುತ್ತದೆ. ವಾಣಿಜ್ಯ ತೆರಿಗೆ ಇಲಾಖೆಯವರು ದಾನ ಪಡೆದ ದಿನದಿಂದ ಇಲ್ಲಿಯವರೆಗೂ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ನಾವೇ ಇರುತ್ತೇವೆ ಎಂದು ನುಡಿಯುತ್ತಾರೆ.

4. ನಾನು ನಿಪಿ-9-ದಾನಪತ್ರ ಕಾಗದವನ್ನು ನೋಡಿರುವುದಿಲ್ಲ. ನಾನು ನಮ್ಮ ವಕೀಲರ ಮುಖಾಂತರ ನಿಪಿ-9- ದಾನ ಪತ್ರವನ್ನು ಹಾಜರುಪಡಿಸಿರುತ್ತೇನೆ. 2016 ರಲ್ಲಿ ಸದರಿ ದಾವೆಯನ್ನು ದಾಖಲಿಸಲು ದಾವಾ ಕಾರಣ ಉಂಟಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ದಾಖಲಿಸುವ ಮೊದಲು ಪ್ರತಿವಾದಿಗಳಿಗೆ ನೋಟೀಸನ್ನು ನೀಡಿರುತ್ತೇವೆ. ನಾವು ಪ್ರತಿವಾದಿಗಳಿಗೆ ದಾನಪತ್ರ ಖೊಟ್ಟಿ ಇದೆ ಎಂದು ಅದನ್ನು ವಾಪಸ್ಸು ಕೊಡಿ ಎಂದು ಕೇಳಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನನ್ನು ಹೊರತುಪಡಿಸಿ ನಮಗೆ ಯಾವುದೇ ಜಮೀನು ಇರುವುದಿಲ್ಲ. ಚಡಚಣ ಗ್ರಾಮದ ಸರ್ವೆ ನಂ. 441/2+3 ಒಟ್ಟು 6 ಎಕರೆ 21 ಗುಂಟೆ ಜಮೀನುಗಳ ಪೈಕಿ ಪಶ್ಚಿಮ ದಿಕ್ಕಿನ 5 ಎಕರೆ ಜಮೀನನ್ನು ಸರ್ಕಾರದ ರಾಜ್ಯಪಾಲರ ವತಿಯಿಂದ ಜಂಟಿ ಆಯುಕ್ತರು, ವಾಣೀಜ್ಯ ತೆರಿಗೆ ಇವರಿಗೆ ಗುಪ್ತವಲಯ, ಬೆಳಗಾವಿ ಇವರ ಪರವಾಗಿ ಅಂದಿನ ಜಿ. ಕೃಷ್ಣ ಪ್ರಸಾದ, ಇಂಡಿಯವರ ಹೆಸರಿಗೆ ಪ್ರತಿವಾದಿ ನಂ. 1 ಇವರು ದಾನ ಪತ್ರ ಮಾಡಿದ್ದು ಅದು ನೊಂದಣಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ಖೊಟ್ಟಿಯಾಗಿ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

5. ಸದರಿ ದಾನಪತ್ರ ನೊಂದಣಿಯಾಗಿದ್ದು ದಸ್ತ ಸಂಖ್ಯೆ: 878 ಒಟ್ಟು 3 ಪುಟಗಳದ್ದು ದಿ: 5-6-1998 ರಂದು ನೊಂದಣಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಜಮೀನನ್ನು ದಾನಕೊಟ್ಟ ನಂತರ ಮ್ಯೂಟೇಶನ ನಂ. 9885 ಎಂದು ನೊಂದಣಿಯಾಗಿರುತ್ತದೆ ಎಂದರೆ ಸರಿಯಲ್ಲ ಅದು ಖೊಟ್ಟಿ ಇರುತ್ತದೆ. ಸದರಿ ಎಮ್. ಆರ್. ನಂ. 9885 ಆದ ನಂತರ ವಾಣಿಜ್ಯ ತೆರಿಗೆ ಇಲಾಖೆಯವರು

ಪ್ರತಿವಾದಿಯರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತದೆ ಎಂದರೆ ಅದು ಖೊಟ್ಟಿ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ. 1 ರವರು ಕಾನೂನುಬದ್ದವಾಗಿ ದಾನಪತ್ರ ನೀಡಿದ್ದರೂ ಸಹ ನಾನು ಮತ್ತು ನನ್ನ ಮಕ್ಕಳು ಮಿಲಾಪಿಯಾಗಿ ಸುಳ್ಳು ಪಾಲು ವಾಟ್ನಿ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ಧೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ವ ಜೆ.ಎಂ.ಎಫ್.ಸಿ., ಇಂಡಿ.